



ವನ್ಯಜೀವಿ ಮಂಡಳಿ'ಯು (SWLB) ಹಲವು ಸಲ ಈ ಯೋಜನೆಗೆ ಒಪ್ಪಿಗೆ ನೀಡಲು ನಿರಾಕರಿಸಿದೆ.

- 2012: ಕರ್ನಾಟಕ ಸರ್ಕಾರದ ಮೂಲಸೌಕರ್ಯ ಇಲಾಖೆಯು ಪುನಃ ಅರ್ಜಿ ಸಲ್ಲಿಸಿತು. ಈ ಬಾರಿ ಯೋಜನೆಯನ್ನು ಸಮರ್ಥಿಸಿಕೊಳ್ಳಲು, 'ಭಾರತೀಯ ವಿಜ್ಞಾನ ಮಂದಿರ'ದ ಪರಿಸರ ವಿಜ್ಞಾನಿ ಡಾ. ಟಿ.ವಿ. ರಾಮಚಂದ್ರ ನೇತೃತ್ವದ ತಂಡ ನೀಡಿದ 'ಪರಿಸರ ನಿರ್ವಹಣಾ ಯೋಜನೆ' (EMP) ವರದಿಯನ್ನು ಬಳಸಿಕೊಂಡಿತು.
- 2015: ಈ ಯೋಜನಾ ಪ್ರಸ್ತಾವದ ಸಮಗ್ರ ಪರಿಶೀಲನೆ ಮಾಡಿ, 2015ರಲ್ಲಿ ಸುಪ್ರೀಕೋಟಿಗೆ ಅಂತಿಮ ವರದಿ ಸಲ್ಲಿಸಿದ ಕೇಂದ್ರೀಯ ಉನ್ನತಾಧಿಕಾರ ಸಮಿತಿಯು (Central Empowered Committee CEC)ಈ ಯೋಜನೆ ಸಾಧುವಲ್ಲ ಅಂತಲೇ ಹೇಳಿತು.
- 2015: ಈ ಯೋಜನಾ ಪ್ರಸ್ತಾವ ಹಾಗೂ ಇದನ್ನು ವಿರೋಧಿಸುವ ಎಲ್ಲ ಅಭಿಪ್ರಾಯ / ಅರ್ಜಿಗಳನ್ನೆಲ್ಲ ಸಮಗ್ರವಾಗಿ ಪರಿಶೀಲಿಸಲು, ಸುಪ್ರೀಂಕೋರ್ಟ್ ಈ ಪ್ರಕರಣವನ್ನು 'ರಾಷ್ಟ್ರೀಯ ಹಸಿರು ನ್ಯಾಯಾಲಯ'ಕ್ಕೆ (National Green Tribunal NGT)) ವರ್ಗಾಯಿಸಿತು.
- 2016: ರಾಷ್ಟ್ರೀಯ ಹಸಿರು ನ್ಯಾಯಾಲಯವು ವಿವರವಾಗಿ ವಿಚಾರಣೆ ನಡೆಸಿ, ರಾಜ್ಯ ಸರ್ಕಾರವು ಪುನಃ ಹೊಸದಾಗಿ ಪರಾಮರ್ಶಿತ ಯೋಜನಾ ಪ್ರಸ್ತಾವವನ್ನು ಸಲ್ಲಿಸಲು ಸ್ವತಂತ್ರವೆಂದು 2016ರ ಫೆಬ್ರುವರಿ 10ರಂದು ತೀರ್ಪಿತ್ತಿತು. ಆನಂತರದಲ್ಲಿ ರಾಜ್ಯ ಸರ್ಕಾರವು ಅರಣ್ಯ ಮತ್ತು ಪರಿಸರ ಮಂತ್ರಾಲಯದ ಒಪ್ಪಿಗೆ ಕೋರಿ ಪುನಃ ಅರ್ಜಿ ಸಲ್ಲಿಸಿತು.
- 2017: ಅರಣ್ಯ ಮಂತ್ರಾಲಯದ 'ಪ್ರಾದೇಶಿಕ ಉನ್ನತಾಧಿಕಾರದ ಸಮಿತಿ'ಯು (Regional Empowered Committee – REC), ಬಹಳಷ್ಟು ಷರತ್ತುಗಳನ್ನು ಹಾಕಿ. 727 ಹೆಕ್ಟೇರ್ ಅರಣ್ಯ ಭೂಮಿ ನೀಡಲು ಒಪ್ಪಿಗೆ ನೀಡಿತು! ಎರಡು ಲಕ್ಷಕ್ಕೂ ಮೀರಿ ಬಲಿತ ಮರ ಕಡಿಯಬೇಕಾದ ಈ ಯೋಜನೆಗೆ ಒಪ್ಪಿಗೆ ನೀಡಲು, ಸರ್ಕಾರದ ತೆರೆಮರೆಯಲ್ಲಿನ ಒತ್ತಡವೇ ಕಾರಣವೆಂದು ಪರಿಸರ ತಜ್ಞರು ಹಾಗೂ ಹೋರಾಟಗಾರರು ಆರೋಪಿಸಿದರು.
- 2018: ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯವು ನಿಯಮಿಸಿದ ವಿಶೇಷ ಅಧಿಕಾರದ ಉನ್ನತ ತಜ್ಞ ಸಮಿತಿಯೊಂದು ಪುನಃ ಯೋಜನಾ ಪ್ರದೇಶಕ್ಕೆ ಬಂದು, ಸ್ಥಳಾಧ್ಯಯನ ನಡೆಸಿ, ತನ್ನ ಸಮಗ್ರ ವರದಿಯನ್ನು ನೀಡಿತು. ಇದರಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ತಜ್ಞರ ಜೊತೆಗೆ 'ರಾಷ್ಟ್ರೀಯ ಹುಲಿ ಪ್ರಾಧಿಕಾರ'ದ (NTCA) ಹಾಗೂ ಡೆಹರಾಡೂನಿನ 'ವನ್ಯಜೀವಿ ಸಂಶೋಧನಾ ಸಂಸ್ಥೆ'ಯ (WII) ತಜ್ಞರಿದ್ದರು. ಇದು ಕೂಡ ಯೋಜನೆಯನ್ನು ಹಮ್ಮಿಕೊಳ್ಳುವುದು ಪಶ್ಚಿಮಘಟ್ಟದ ಸ್ಥಿರತೆ ಮತ್ತು ಜನರ ಸುರಕ್ಷತೆಗೆ ಮಾರಕವೆಂದು ಹೇಳಿತು.
- 9 ಮಾರ್ಚ್ 2020: ಮುಖ್ಯಮಂತ್ರಿಗಳ ಅಧ್ಯಕ್ಷತೆಯ ರಾಜ್ಯ ವನ್ಯಜೀವಿ ಮಂಡಳಿಯ 13ನೇ ಸಭೆಯು ಈ ಯೋಜನೆಯನ್ನು ತಿರಸ್ಕರಿಸಿತು.
- 20 ಮಾರ್ಚ್ 2020: ಕೇವಲ ಹತ್ತು ದಿನಗಳ ನಂತರ ನಡೆದ ಮತ್ತೊಂದು ವಿಶೇಷ ಸಭೆಯಲ್ಲಿ 'ವನ್ಯಜೀವಿ ಮಂಡಳಿ ಈ ಯೋಜನೆಗೆ ಹಸಿರು ನಿಶಾನೆ ತೋರಿಸಿತು! ಇನ್ನು ಅಂತಿಮವಾಗಿ, ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯದ ಒಪ್ಪಿಗೆ ಬರುವುದಷ್ಟೇ ಬಾಕಿಯಿದೆ.



ಇರುತ್ತದೆ. ತೀರಾ ಕಡಿದಾಗಿರುವ ಇಂಥ ಸೂಕ್ಷ್ಮ ಪ್ರದೇಶದಲ್ಲಿ ಮತ್ತಷ್ಟು ಭೂಮಿ ಅಗೆಯುವ ಕಾಮಗಾರಿ ಬೇಕೆ ಎಂದು ಯೋಚಿಸಬೇಕಿದೆ.

ರೈಲುಮಾರ್ಗವೆಂದರೆ ಅದು ಹಲವು ಕಾಮಗಾರಿಗಳ ಮೊತ್ತ. 20ಕ್ಕೂ ಹೆಚ್ಚಿನ ನಿಲ್ದಾಣಗಳ ನಿರ್ಮಾಣವಾಗಬೇಕೆಂದರೆ, ಅವಕ್ಕೆ ಸ್ಥಳ ಬೇಕು. ಅವನ್ನು ಹೆದ್ದಾರಿಗೆ ಸಂಪರ್ಕಿಸಲು ಹೊಸಮಾರ್ಗಗಳು ಬೇಕು. ಅಗತ್ಯವಿದ್ದೆಡೆ ಸುರಂಗಗಳೂ ನಿರ್ಮಾಣವಾಗಬೇಕು. ಹಲವು ಚಿಕ್ಕ–ದೊಡ್ಡ ಸೇತುವೆಗಳು ರಚನೆಯಾಗಬೇಕು. ಈ ಎಲ್ಲ ಕಾಮಗಾರಿಗೆ ಬೇಕಾದ ಕಲ್ಲಿಗೆ ಸಮಿಪದಲ್ಲೇ ಕ್ವಾರಿ ನಡೆಸಬೇಕು. ಈ ಎಲ್ಲ ಕಾಮಗಾರಿಗಳು, ಅದಕ್ಕಾಗಿ ಹೊಸ ರಸ್ತೆಗಳು ಹಾಗೂ ಕೂಲಿಗಳ ವಸತಿ ಸಮುಚ್ಚಯಕ್ಕೆ ಮತ್ತಷ್ಟು ಕಾಡು ಕಡೆಯಬೇಕು. ಭಾರಿ ಯಂತ್ರಗಳ ಸದ್ದು; ಕಾಮಗಾರಿಯ ಧೂಳು! ಮುಂದೊಂದು ದಶಕ ಬೇಡ್ತಿ ಕಣಿವೆ ಛಿದ್ರವಾಗುವುದಲ್ಲದೇ ಇನ್ನೇನು ಇದ್ದೀತು?

ಈ ಕುರಿತು ಕಳೆದ ಎರಡು ದಶಕಗಳಿಂದ ಅಧ್ಯಯನ ಹಾಗೂ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಯುತ್ತಿದೆಯಷ್ಟೇ? ಇವನ್ನೆಲ್ಲ ಪರಾಮರ್ಶಿಸಿ, ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆ ಕಾನೂನುಗಳ ಅನ್ವಯ ಕಾರ್ಯನಿರ್ವಹಿಸುವ ಸಾಂವಿಧಾನಿಕ ಸಂಸ್ಥೆಗಳು ಹಾಗೂ ತಜ್ಞ ಸಮಿತಿಗಳೆಲ್ಲವೂ, ಈವರೆಗೂ ಈ ಯೋಜನೆಗೆ ಅನುಮತಿ ತಿರಸ್ಕರಿಸುತ್ತಲೇ ಬಂದಿದ್ದವು. 'ರಾಷ್ಟ್ರೀಯ ಹುಲಿ

ಸಹ್ಯಾದ್ರಿಯ ಒಡಲೊಳಗೆ ತಣ್ಣಗೆ ಮೈದುಂಬಿ ನಿಂತಿರುವ ಇಂಥ ಎಷ್ಟು ಚೆಂಗೊಳಗಳಿವೆಯೋ...